## ವಿಜ್ಞಾನ

# ಕಾಮನಬಿಲ್ಲನ್ನು(ಮಳೆಬಿಲ್ಲು) ಏಕೆ ಮುಟ್ಟಲಾಗದು?

■ ಆರ್.ಬಿ.ಗುರುಬಸವರಾಜ

ಮಳೆಗಾಲದ ಸಂಜೆ ತಿಳಿಬಿಸಿಲಿನಲ್ಲಿ ಮಳೆ ಪ್ರಾರಂಭವಾಯ್ತು. ತಕ್ಷಣವೇ ಪೂರ್ವ ದಿಕ್ಕಿನಲ್ಲಿ ಮಳೆಬಿಲ್ಲು ಕಾಣಿಸಿಕೊಂಡಿತು. ಮಳೆಬಿಲ್ಲನ್ನು ನೋಡಿದ ವೀರೇಂದ್ರ ಕುಣಿದಾಡತೊಡಗಿದ. ತಕ್ಷಣ ಅಪ್ಪನ ಬಳಿ ಓಡಿ ಹೋಗಿ 'ಪಪ್ಪಾ, ನಾವು ಮಳೆಬಿಲ್ಲನ್ನು ಮುಟ್ಟಬಹುದೇ? ಎಂದನು. 'ಇಲ್ಲಪ್ಪ, ಮಳೆಬಿಲ್ಲನ್ನು ಮುಟ್ಟಲಾಗದು' ಎಂದರು. "ಪಪ್ಪಾ, ಮಳೆಬಿಲ್ಲನ್ನು ಏಕೆ ಮುಟ್ಟಲಾಗದು?" ಎಂದು ಮರುಪ್ರಶ್ನೆ ಹಾಕಿದ. ಅದಕ್ಕೆ ತಂದೆಯ ಉತ್ತರ ಹೀಗಿದೆ.

ಮಳೆಬಿಲ್ಲುಗಳು ವಾಸ್ತವವಾಗಿ ದೃಷ್ಟಿ ಭ್ರಮೆಯಾಗಿದ್ದು, ಬೆಳಕು ವಕ್ರೀಭವನಗೊಂಡಾಗ ಅಥವಾ ಬಾಗಿದಾಗ ಅದು ಮಳೆ ನೀರಿನ ಹನಿಗಳ ಮೂಲಕ ಹಾದುಹೋಗುತ್ತದೆ. ಬೆಳಕಿನ ವಿಭಿನ್ನ ತರಂಗಾಂತರಗಳು ಸ್ವಲ್ಪ ವಿಭಿನ್ನ ಕೋನಗಳಲ್ಲಿ ವಕ್ರೀಭವನಗೊಳ್ಳುವ



ಪರಿಣಾಮವಾಗಿ ಮಳೆ ಬಿಲ್ಲಿನ ಬಣ್ಣಗಳು ರೂಪುಗೊಳ್ಳುತ್ತವೆ. ಬೆಳಕು ವಕ್ರೀಭವನ ಗೊಳ್ಳುವ ಮತ್ತು ಪ್ರತಿಫಲಿಸುವ ಕೋನವು ಮಳೆಬಿಲ್ಲಿನ ಆಕಾರ ಮತ್ತು ಸ್ಥಾನವನ್ನು ನಿರ್ಧರಿಸುತ್ತದೆ. ಬೆಳಕು ಮಳೆಹನಿಯಿಂದ ಸುಮಾರು 42 ಡಿಗ್ರಿ ಕೋನದಲ್ಲಿ ನಿರ್ಗಮಿಸುತ್ತದೆ. ಅದಕ್ಕಾಗಿಯೇ ಮಳೆಬಿಲ್ಲಿನ ಆರ್ಕ್ ಯಾವಾಗಲೂ ಆಕಾಶದಲ್ಲಿ ಸೂರ್ಯನಿಗೆ ನೇರವಾಗಿ ಎದುರಾಗಿರುವ ಬಿಂದುವಿನ ಸುತ್ತ ಕೇಂದ್ರೀಕೃತವಾಗಿರುತ್ತದೆ.

ಮಳೆಬಿಲ್ಲು ಭೌತಿಕ ಅಸ್ತಿತ್ವವನ್ನು ಹೊಂದಿರದ ಕಾರಣ ಅವುಗಳನ್ನು ಸ್ಪರ್ಶಿಸುವ ಅಥವಾ ಹಿಡಿದಿಟ್ಟುಕೊಳ್ಳುವ ಭೌತಿಕ ವಸ್ತುಗಳಲ್ಲ. ನಾವು ಟೆಲಿವಿಷನ್ ಅಥವಾ ಕಂಪ್ಯೂಟರ್ ಪರದೆಯಲ್ಲಿ ನೋಡುವ ಚಿತ್ರಗಳನ್ನು ಹೇಗೆ ಸ್ಪರ್ಶಿಸಲಾಗುದಿಲ್ಲವೋ, ಹಾಗೆ ಅದು ದೃಷ್ಟಿಗೋಚರವಾಗಿ ಗ್ರಹಿಸುವ ತಂತ್ರಜ್ಞಾನದಿಂದ ರಚಿಸಲಾದ ಭ್ರಮೆಯಾಗಿದೆ.

ಮಳೆಬಿಲ್ಲುಗಳು ಭೌತಿಕ ವಸ್ತುಗಳಂತೆ ಕಾಣಿಸಬಹುದಾದರೂ ಅವು ವಾಸ್ತವವಾಗಿ ಲಕ್ಷಾಂತರ ಸಣ್ಣ ನೀರಿನ ಹನಿಗಳ ಮೂಲಕ ಹೊರಟ ಬೆಳಕಿನಿಂದ ಮಾಡಲ್ಪಟ್ಟಿವೆ. ಮಳೆಬಿಲ್ಲು ನಿರ್ದಿಷ್ಟ ರೀತಿಯಲ್ಲಿ ಬೆಳಕನ್ನು ಚದುರಿಸುತ್ತದೆ. ಈ ನೀರಿನ ಹನಿಗಳ ಮೂಲಕ ಸೂರ್ಯನ ಬೆಳಕು ಹಾದುಹೋದಾಗ ಬೆಳಕು ವಕ್ರೀಭವನಗೊಳ್ಳುತ್ತದೆ ಅಥವಾ ಬಾಗುತ್ತದೆ ಮತ್ತು ನಂತರ ಹನಿಗಳ ಒಳಗೆ ಪ್ರತಿಫಲಿಸುತ್ತದೆ. ಇದು ಬೆಳಕನ್ನು ಪ್ರತ್ಯೇಕ ಬಣ್ಣಗಳಾಗಿ ಬೇರ್ಪಡಿಸಲು ಕಾರಣವಾಗುತ್ತದೆ ಮತ್ತು ನಾವು ಆಕಾಶದಲ್ಲಿ ನೋಡುವ ವಿಶಿಷ್ಟವಾದ ಮಳೆಬಿಲ್ಲಿನ ಮಾದರಿಯನ್ನು ಸೃಷ್ಟಿಸುತ್ತದೆ.

ಮಳೆಬಿಲ್ಲುಗಳು ಭೌತಿಕ ವಸ್ತುಗಳಲ್ಲದ ಕಾರಣ ಮತ್ತು ಬೆಳಕು ವಕ್ರೀಭವನಗೊಳ್ಳುವ ಮತ್ತು ನೀರಿನ ಹನಿಗಳಲ್ಲಿ ಪ್ರತಿಫಲಿಸುವ ವಿಧಾನದ ಪರಿಣಾಮವಾಗಿದೆ. ಮಳೆಬಿಲ್ಲನ್ನು ಸ್ಪರ್ಶಿಸುವುದು ಅಥವಾ ಗ್ರಹಿಸುವುದು ಅಸಾಧ್ಯ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಗಣಿತ ಸಮಸ್ಯೆ ಪರಿಹಾರ

ಗಣಿತ ಜ್ಞಾನ ಒಬ್ಬ ವಿದ್ಯಾರ್ಥಿಯ ಯಶಸ್ಸಿಗೆ ಅನಿವಾರ್ಯ. ಆದರೆ ಅನೇಕ ವಿದ್ಯಾರ್ಥಿಗಳು ಇದರಿಂದ ವಿಮುಖರಾಗುತ್ತಿರುವುದು ಅಷ್ಟೇಸತ್ಯ. ಸಾಮಾನ್ಯವಾಗಿ ಮಕ್ಕಳ ವಿದ್ಯಾಭ್ಯಾಸದಲ್ಲಿ ಕಂಡು ಬರುವ ಕ್ಲಿಷ್ಟ ವಿಷಯಗಳಲ್ಲಿ ಗಣಿತಕ್ಕೂ ಸ್ಥಾನವಿದೆ. ಅದರಲ್ಲೂ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ನಾನಾ ಕಾರಣಗಳಿಂದ ಈ ವಿಷಯ ಕಬ್ಬಿಣದ ಕಡಲೆಯಾಗಿರುತ್ತದೆ.

'ನನಗೆ ಗಣಿತ ತಲೆಗೆ ಹತ್ತುತ್ತಾನೇ ಇಲ್ಲ', 'ಎಲ್ಲಾ ವಿಷಯಗಳಲ್ಲಿ ಉತ್ತಮ ಅಂಕ ದೊರೆತಿದೆ, ಆದರೆ ಗಣಿತದಲ್ಲಿ ಮಾತ್ರ ಹಿಂದಿದ್ದೇನೆ', 'ಎಲ್ಲಾ ವಿಷಯಗಳಿಗೆ ನೀಡಿದಷ್ಟೇ ಸಮಯವನ್ನು ಗಣಿತಕ್ಕೆ ನೀಡಿದ್ದೇ ಆದರೂ ಯಶಸ್ಸು ಸಿಗುತ್ತಿಲ್ಲ' ಎಂಬ ಮಾತುಗಳು ಮಕ್ಕಳ ಬಾಯಿಂದ ಸಹಜವಾಗಿ ಹೊರಬರುತ್ತವೆ. ಮಕ್ಕಳಲ್ಲಿ ಗಣಿತದ ಬಗ್ಗೆ ವೈಜ್ಞಾನಿಕ ಮನೋಭಾವ ಬೆಳೆಸುವುದು ಹೇಗೆ? ಎಂಬುದು ಶಿಕ್ಷಕರ ಮುಂದಿರುವ ಬಹುದೊಡ್ಡ ಸವಾಲು. ಈ ಹಿನ್ನೆಲೆಯಲ್ಲಿ ಗಣಿತ ಸರಳೀಕರಿಸುವ ಚರ್ಚೆಗಳು ನವೀನ ಪ್ರಯೋಗಗಳು ನಡೆಯುತ್ತಲೇ ಇವೆ.

### ಗಣಿತ ಕಲಿಕೆಯ ಮಹತ್ವ:–

ಗಣಿತವೆಂದರೆ ಬರೀ ಕಠಿಣ ಹಾಗೂ ತಲೆನೋವಿನ ವಿಷಯ. ಅದು ರಂಜನೀಯವಂತೂ ಅಲ್ಲವೇ ಅಲ್ಲ ಎಂಬುದು ಅನೇಕ ಮಕ್ಕಳ, ಶಿಕ್ಷಕರು ಹಾಗೂ ಪಾಲಕರಲ್ಲಿ ಕಂಡು ಬರುವ ಸಾಮಾನ್ಯವಾಗಿ ತಪ್ಪು ಕಲ್ಪನೆ. ಇದರ ಫಲವಾಗಿ ನಮ್ಮ ಮಕ್ಕಳು ಗಣಿತದ ಭಯದಿಂದ ನರಳುತ್ತಿದ್ದಾರೆ. ಈ ಭಯ ನಿನ್ನೆ ಮೊನ್ನೆಯದಲ್ಲ. ಬಹು ಹಿಂದಿನಿಂದಲೂ ಮುಂದುವರೆಯುತ್ತಿದೆ.

ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರ ಈ ನಾಲ್ಕು ಕ್ರಿಯೆಗಳಲ್ಲಿ ಪರಿಪೂರ್ಣತೆ ಸಾಧಿಸಿದರೆ ಅಂಥವರನ್ನು ನಾವು ಪ್ರತಿಭಾನ್ವಿತರೆಂದು ಕರೆಯುತ್ತಿದ್ದೇವೆ. ಹಾಗಾಗಿ ನಗರಗಳಲ್ಲಿ ಈ ಕ್ರಿಯೆಗಳನ್ನು ವೇಗವಾಗಿ ಕಲಿಸುತ್ತೇವೆಂದು (ಅಬೆಕಸ್) ಅನೇಕ ಸಂಸ್ಥೆಗಳು ಹುಟ್ಟಿಕೊಂಡು ಹಣ ಬಾಚಿಕೊಳ್ಳುತ್ತಿವೆ. ಇವಿಷ್ಟೆ ಗಣಿತ ಎಂಬ ಕೂಪ ಮಂಡೂಕ ಮನೋಭಾವನೆಯವರೂ ನಮ್ಮ ನಡುವೆ ಇದ್ದಾರೆ. ವಾಸ್ತವವಾಗಿ ಇವು ಗಣಿತದಲ್ಲಿನ ನೂರಾರು ಪ್ರಕ್ರಿಯೆಗಳಲ್ಲಿ ಗಮನಿಸಬಹುದಾದ ನಾಲ್ಕು ಪ್ರಕ್ರಿಯೆಗಳು. ಇವುಗಳ ಹೊರತುಪಡಿಸಿದ ಗಣಿತದ ಸಾಕಷ್ಟು ಅಂಶಗಳನ್ನು ಕಾಣಬಹುದು. "ನಾವು ಅವುಗಳನ್ನು ಗಮನಿಸದೇ ಇರುವುದರಿಂದ ಗಣಿತ ನಮಗೆ ಮನೋರಂಜನೆಯಾಗಿ, ಆಸಕ್ತಿದಾಯಕವಾಗಿ ಕಾಣುತ್ತಿಲ್ಲ" ಎಂದು ಗಣಿತಕ್ಕಾಗಿ ಸುವಿದ್ಯ ಸಂಸ್ಥೆ ತೆರೆದು, ಅದರಲ್ಲಿ ಅನೇಕ ವರ್ಷಗಳಿಂದ ಪ್ರಯೋಗ ನಡೆಸಿರುವ ಡಾ॥ಎಸ್.ಎನ್. ಗಣನಾಥ್ ವಿಷಾದದಿಂದ ಹೇಳುತ್ತಾರೆ.



ಡಾ.ಪರಮೇಶ್ವರಯ್ಯ, ಸೊಪ್ಪಿಮಠ ಶಿಕ್ಷಕರು, ಹಗರಿಬೊಮ್ಮನಹಳ್ಳಿ

Hampi Times E-paper
SCAN AND READ

ನಮ್ಮ ಶಾಲೆಗಳಲ್ಲಿ ಗಣಿತವನ್ನು ಯಾಕೆ ಕಲಿಸಲಾಗುತ್ತಿದೆ? ಎಂದು ಪ್ರಶ್ನಿಸಿದರೆ ಸ್ಪಷ್ಟ ಉತ್ತರ ಸರಿಯಾಗಿ ಸಿಗುವುದಿಲ್ಲ. ಗಣಿತವು ದೈನಂದಿನ ಜೀವನಕ್ಕೆ ಅತ್ಯುಪಯುಕ್ತವಾಗಿದೆ. ಅಲ್ಲದೆ ವಿಜ್ಞಾನ, ವಾಣಿಜ್ಯ ಮತ್ತು ಔದ್ಯೋಗಿಕ ಕ್ಷೇತ್ರಗಳಲ್ಲಿ ಅದು ಪ್ರಯೋಜನಕಾರಿ. ಗಣಿತವೊಂದು ಅತ್ಯಂತ ಸಮರ್ಥವಾದ ಮತ್ತು ನಿಸ್ಸಂದಿಗ್ಧ ಸಂಪರ್ಕ ಸಾಧನ. ಮುಂದೆ ನಡೆಯಬಹುದಾದುದನ್ನು ಮುಂಚಿತವಾಗಿಯೇ ತರ್ಕಿಸಲು ಮತ್ತು ವಿವರಿಸಲು ಗಣಿತದಿಂದ ಸಾಧ್ಯವಾಗಿದೆ. ಗಣಿತದಲ್ಲಿ ಉಪಯೋಗಿಸುವ ಪ್ರತೀಕಗಳಿಗೆ ಅವುಗಳದೇ ಆದ ವ್ಯಾಕರಣ ಮತ್ತು ವಿನ್ಯಾಸಗಳಿವೆ. ಗಣಿತಕ್ಕೊಂದು ಬಗೆಯ ರಸಪ್ರಜ್ಞೆಯಿದ್ದು, ಅದು ತರ್ಕಬದ್ಧ ವಿಕಸನಾ ಶಕ್ತಿಯನ್ನು ಬೆಳೆಸುತ್ತದೆ ಎಂಬುದನ್ನ ಎಲ್ಲರೂ ಒಪ್ಪುತ್ತಾರೆ.

ಈ ವಿಕಸನವು ಒಂದೆರೆಡು ದಿನಗಳಲ್ಲಿ ಆಗುವ ಪ್ರಕ್ರಿಯೆಯಲ್ಲ. ಕೆಲವು ವರ್ಷಗಳೇ ಬೇಕಾಗುತ್ತವೆ. ಪ್ರಾಥಮಿಕ ಹಂತದಲ್ಲಿ ಮೂಲಕ್ರಿಯೆಗಳನಷ್ಟೆ ಅಭ್ಯಾಸ ಮಾಡದೇ, ಪ್ರಚಲಿತ ವಿದ್ಯಮಾನದಲ್ಲಿ ಗಣಿತ ಕ್ಷೇತ್ರದ ವ್ಯಾಪ್ತಿ ಮತ್ತು ಮಹತ್ವ ಮನನ ಮಾಡಿಸಬೇಕು. ದಿನನಿತ್ಯದ ಬದುಕಿನಲ್ಲಿ ವಿದ್ಯಾರ್ಥಿ ಶಾಲೆಯಲ್ಲಿ ಅಭ್ಯಸ ಮಾಡಿದ್ದನ್ನು ಪ್ರಾಯೋಗಿಕವಾಗಿ ಅಳವಡಿಸಿಕೊಳ್ಳಲು ಅವಕಾಶ ನೀಡಬೇಕು. ಆಗ ಮಗು ತನ್ನದೇ ಆದ ಕೌಶಲ್ಯವನ್ನು ಪ್ರದರ್ಶಿಸುತ್ತದೆ. ಪರಿಕಲ್ಪನೆಗಳನ್ನು ತಾರ್ಕಿಕವಾಗಿ ವಿಮರ್ಶಿಸಲು ಪ್ರಾರಂಭಿಸುತ್ತದೆ. ಇದನ್ನೆಲ್ಲಾ ಶಿಕ್ಷಕರು ವಿಭಿನ್ನ ದೃಷ್ಟಿಕೋನಗಳಿಂದ ಅವಲೋಕಿಸುವ ಸಾಮರ್ಥ್ಯ





ಬೆಳೆಸಿಕೊಳ್ಳಬೇಕು.

ಇಂದು ನಮ್ಮ ಶಾಲೆಗಳಲ್ಲಿ ಶಿಕ್ಷಕರು, ಗಣಿತದಲ್ಲಿ ಹಿಂದುಳಿದ ಮಗುವಿಗೆ ಅತಿ ಹೆಚ್ಚು ಮನೆಕೆಲಸ ನೀಡುತ್ತಾರೆ. ಉತ್ತರಗಳನ್ನು ಮಾತ್ರ ಪದೇ ಪದೇ ಹೇಳುತ್ತಾರೆ ಇಲ್ಲವೇ ಹೇಳಿಸುತ್ತಾರೆ. ಕೆಲ ಸಾರಿ ಶಿಕ್ಷೆಯನ್ನೂ ನೀಡುತ್ತಾರೆ. ಆದರೆ ಇವು ಯಾವುವೂ ಮಗು ಗಣಿತದಲ್ಲಿ ಹೆಚ್ಚು ಅಂಕ ಪಡೆಯಲು ನೆರವಾಗುವುದಿಲ್ಲ. ಶಿಕ್ಷಕರು ಹಿಂದುಳಿದ ಮಕ್ಕಳ ಕುರಿತು ಹೆಚ್ಚು ಜವಬ್ದಾರಿಯಿಂದ ವರ್ತಿಸಬೇಕಾಗುತ್ತದೆ. ಗಣಿತದ ಕುರಿತು ವಿದ್ಯಾರ್ಥಿಗಳಲ್ಲಿ ಮೂಡಿರುವ ಗೊಂದಲ, ಅಸ್ಪಷ್ಟತೆ, ತಪ್ಪುಕಲ್ಪನೆಗಳನ್ನು ಸರಿಪಡಿಸಬೇಕು. ಅವುಗಳ ಬಗ್ಗೆ ಎಳೆ ಎಳೆಯಾಗಿ ಮಾಹಿತಿ ನೀಡಿ ಮಗುವಿನಲ್ಲಿ ಮಾನಸಿಕ ಸ್ಥೈರ್ಯ ವೃದ್ಧಿಸುವಂತೆ ಮಾಡಬೇಕಿದೆ. ಈ ನಿಟ್ಟಿನಲ್ಲಿ ಸೇರ್ಪಡೆಯಾಗುವ ವಿನೂತನ ವಿಧಾನವೇ ಅಂತರಜಾಲದಲ್ಲಿ ಉಚಿತ ಗಣಿತ.

### ಅಂತರ್‌ಜಾಲದಲ್ಲಿ ಉಚಿತ ಗಣಿತ....

ಗಣಿತ ಕಲಿಕೆ ಸುಗಮ ಗೊಳಿಸುತ್ತಾ ಮಕ್ಕಳನ್ನು ಬಲಿಷ್ಠರನ್ನಾಗಿಸಲು ಅನೇಕ ಪ್ರಯೋಗಗಳು ನಡೆಯುತ್ತಲಿವೆ. ಮಕ್ಕಳ ಗಣಿತ ಕಲಿಕೆಗೆ ನೆರವಾಗಲು ಅಂತರ್‌ಜಾಲದಲ್ಲಿ ಅದರಲ್ಲೂ ಕನ್ನಡದಲ್ಲಿ ಒಂದು ಪುಟ್ಟ ಪ್ರಯತ್ನ ಬಹು ದೊಡ್ಡ ಸಾಧನೆಯನ್ನು ಮಾಡುತ್ತಿದೆ ಎಂದರೆ ಅಚ್ಚರಿಯಾಗುತ್ತದೆ. ಜ್ಞಾನಕ್ಕಾಗಿ ಮಾತ್ರ ಓದು ಅಲ್ಲ, ಅದು ಜೀವನದ ಅವಶ್ಯಕತೆ ಪೂರೈಸಬೇಕು ಎಂಬ ಮಹದಾಶಯದೊಂದಿಗೆ ರಾಜಶೇಖರ ಸೋಮಯಾಜಿ ಅವರು ಉಚಿತವಾಗಿ www.FREEganita.com/abhyasa/content.html, ಪ್ರಸ್ತುತ ಪಡಿಸಿದ್ದಾರೆ. ಯಾವುದೇ ಶುಲ್ಕ ನೀಡದೆ ಯಾರು ಬೇಕಾದರೂ ಈ ಸೌಲಭ್ಯ ಪಡೆದುಕೊಳ್ಳಬಹುದಾಗಿದೆ.

ಸೋಮಯಾಜಿ ಅವರು ಮೈಸೂರು ವಿ.ವಿಯಲ್ಲಿ ಎಂ.ಎಸ್ಸಿಯಲ್ಲಿ ಮೊದಲ ರ್‍ಯಾಂಕ್ ಪಡೆದು ಸಾಫ್ಟವೇರ್ ಉದ್ಯೋಗಿಯಾಗಿ ನಾಲ್ಕು ದಶಕಗಳ ಕಾಲ ದುಡಿದಿದ್ದಾರೆ. ತಾವು ಕಲಿತಿದ್ದನ್ನು ಗ್ರಾಮೀಣ ಪ್ರದೇಶದ ಮಕ್ಕಳಿಗೆ ಹಂಚಬೇಕು ಎನ್ನುವ ಕನಸು ಕಂಡರು. ಅದಕ್ಕೆ ಪೂರಕವಾಗಿ ಸಾಫ್ಟವೇರ್ ಕೆಲಸ ಮಾಡಿದ್ದರಿಂದ ಸ್ವತಃ ವೆಬ್ ಪ್ರಾರಂಭಿಸಿದ್ದಾರೆ. ಸರಕಾರಿ ಶಾಲೆಯ ಕನ್ನಡ ಮಾಧ್ಯಮದ ಮಕ್ಕಳಿಗೆ ಸುಲಭ ಮತ್ತು ಉಚಿತವಾಗಿ ಅನುಕೂಲವಾಗುವಂತೆ ಈ ವೆಬ್ ಸೃಷ್ಟಿಸಲು ಅಪಾರ ಶ್ರಮ ಪಟ್ಟಿದ್ದಾರೆ.

ರಾಜಶೇಖರ ಸೋಮಯಾಜಿ ತಮ್ಮ ಈ ವಿಭಿನ್ನ ಕೆಲಸದ ಬಗ್ಗೆ ಅವರು ಹೇಳುವುದೇನೆಂದರೆ "ಪ್ರಸ್ತುತ ದಿನದಲ್ಲಿ ವಿಜ್ಞಾನದಷ್ಟೇ ಪ್ರಾಮುಖ್ಯತೆಯನ್ನು ಗಣಿತ ಪಡೆದುಕೊಳ್ಳುತ್ತಿದೆ. ಅದನ್ನು ವಿದ್ಯಾರ್ಥಿಗಳ ಮನಸ್ಸಿಗೆ ನಾಟುವಂತೆ ಮಾಡಲೇಬೇಕಿದೆ. ಹೊಸ ಹೊಸ ಆಯಾಮ. ನವನವೀನ ಬೋಧನಾ ಪದ್ಧತಿ ಮತ್ತು ಪರಿಕಲ್ಪನೆಗಳ ಮೂಲಕ ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸಬೇಕು. ಸೂಕ್ತ ಮಾರ್ಗದರ್ಶನದೊಂದಿಗೆ ಹೆಚ್ಚಿನ ಅರಿವು ನೀಡಬೇಕಾಗುತ್ತದೆ. ಅದಕ್ಕೆ ಪೂರಕವಾಗಿ ಆಧುನಿಕ ಕಲಿಕಾ ತಂತ್ರಗಳನ್ನು– ಕಂಪ್ಯೂಟರ್, ಸಿಡಿ, ಅಂತರ್‌ಜಾಲಗಳನ್ನು ಉಪಯೋಗಿಸಿಕೊಂಡು ಮಕ್ಕಳ ಸಾಮಾರ್ಥ್ಯ ವಿಕಾಸಿಸಬೇಕಿದೆ. ಈ ವಿಕಸನವು ಒಂದೆರೆಡು ದಿನಗಳಲ್ಲಿ ಆಗುವ ಪ್ರಕ್ರಿಯೆಯಲ್ಲ. ಕೆಲವು ವರ್ಷಗಳೇ ಬೇಕಾಗುತ್ತವೆ. ಹಿಂದುಳಿದ ಮಕ್ಕಳ ಕುರಿತು ಹೆಚ್ಚು ಜವಬ್ದಾರಿಯಿಂದ ವರ್ತಿಸಬೇಕಾಗುತ್ತದೆ. ಗಣಿತದ ಕುರಿತು ವಿದ್ಯಾರ್ಥಿಗಳಲ್ಲಿ ಮೂಡಿರುವ ಗೊಂದಲ, ಅಸ್ಪಷ್ಟತೆ, ತಪ್ಪುಕಲ್ಪನೆಗಳನ್ನು ಸರಿಪಡಿಸಬೇಕು. ಅವುಗಳ ಬಗ್ಗೆ ಎಳೆ ಎಳೆಯಾಗಿ ಮಾಹಿತಿ ನೀಡಿ ಮಗುವಿನಲ್ಲಿ ಮಾನಸಿಕ ಸ್ಥೈರ್ಯ ವೃದ್ಧಿಸುವಂತೆ ಮಾಡಬೇಕು ಎನ್ನುವ ನನ್ನ ಬಹುದಿನದ ಆಸೆ ಈ ವೆಬ್ ಮೂಲಕ ಈಡೇರಿದೆ" ಎನ್ನುತ್ತಾರೆ.

ನೂತನ ಪಠ್ಯಕ್ರಮಕ್ಕೆ ಅನುಗುಣವಾಗಿ 8, 9 ಮತ್ತು 10 ನೇ ತರಗತಿಯ ಗಣಿತ ಎಲ್ಲಾ ಪಾಠಗಳನ್ನು ಅತ್ಯಂತ ಹಿರಿಯ/ನುರಿತ ತಜ್ಞ ಶಿಕ್ಷಕರಿಂದ ಸರಳ–ಸುಲಭ ಕಲಿಕೆಗೆ ನೆರವಾಗುವಂತೆ ಈ ಅಂತರಜಾಲದಲ್ಲಿ ರೂಪಿಸಲಾಗಿದೆ. ಅವುಗಳಲ್ಲಿ ಶ್ರೇಷ್ಠ ಉದಾಹರಣೆಗಳು, ಸಮಸ್ಯೆಗಳಿಗೆ ಸರಳ ಪರಿಹಾರ, ಪರಾಮರ್ಶಿಸುವ ಅಂಶಗಳು ಮಕ್ಕಳಿಗೆ ಹೆಚ್ಚು ಬಲ ತರುತ್ತವೆ. ಎಲ್ಲಾ ಅಭ್ಯಾಸದ ಸಮಸ್ಯೆಗಳನ್ನು ಬಿಡಿಸಲಾಗಿದೆ(www.FREEganita.com/) ಅವುಗಳನ್ನು ಪಿಡಿಎಫ್ ರೂಪದಲ್ಲಿ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಕನ್ನಡ ಆವೃತ್ತಿಯ ಜೊತೆಗೆ ಇಂಗ್ಲಿಷ್ ಆವೃತ್ತಿಯಲ್ಲೂ ಅದು ದೊರೆಯುವುದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಲಾಭ ತಂದು ಕೊಡುತ್ತದೆ. ಗಣಿತದ ಗುಮ್ಮನನ್ನು ಮಕ್ಕಳಿಂದ ದೂರ ಸರಿಸಲು ಅಂತರ್ಜಾಲದ ಈ ಪ್ರಯತ್ನ ಖಂಡಿತ ಪ್ರಶಂಸನೀಯ.





ಇಷ್ಟಕ್ಕೆ ತೃಪ್ತರಗದ ಸೊಮಯಾಜಿ ಅವರು ಮಕ್ಕಳ ಗಣಿತ ಸಮಸ್ಯೆಗೆ ನೇರವಾಗಿ ತಾವೇ ಉತ್ತರಿಸುವ ವ್ಯವಸ್ಥೆಯನ್ನು ಮಾಡಿದ್ದಾರೆ. 8, 9 ಮತ್ತು 10ನೇ ತರಗತಿಯಲ್ಲಿ ಗಣಿತ ಕಲಿಯುತ್ತಿರುವ ಮಕ್ಕಳಿಗೆ ಕಾರಣಾಂತರಗಳಿಂದ ತರಗತಿಗೆ ಹಾಜರಾಗಲು ಸಾಧ್ಯವಾಗದೇ ಇದ್ದಾಗ ಅಥವಾ ಪ್ರಶ್ನೆ ಕೇಳಲು ಸಂಕೋಚವಾದಾಗ ಪಠ್ಯಪುಸ್ತಕದಲ್ಲಿನ ಎಲ್ಲಾ ಪಾಠಗಳನ್ನು ಕಲಿಸಲು ಅಸಾಧ್ಯವಾದಾಗ ಮತ್ತು ಅಲ್ಲಿನ ಎಲ್ಲಾ ಸಮಸ್ಯೆಗಳನ್ನು ಬಿಡಿಸಲು ಸಾಧ್ಯವಾಗದೇ ಇದ್ದಾಗ ಅಲ್ಲಿನ ಸಮಸ್ಯೆಗಳು ವಿದ್ಯಾರ್ಥಿಗಳಿಗೆ ಸಮಸ್ಯೆಯಾಗಿಯೇ ಉಳಿಯುತ್ತವೆ. ಇದಕ್ಕೆ ಪರಿಹಾರವನ್ನು ಅವರು ನೀಡಿದ್ದಾರೆ.

### ಮಕ್ಕಳ ಸಮಸ್ಯೆ ನೇರ ಉತ್ತರ:–

ಗಣಿತದ ವಿಷಯದ ಕುರಿತಾಗಿ ಮಕ್ಕಳ ಪ್ರಶ್ನೆ, ಸಂಶಯ, ಸಂದೇಹ ಈ ಎಲ್ಲವನ್ನೂ ದೂರ ಮಾಡುವ ವ್ಯವಸ್ಥೆ ತೆರೆದಿದ್ದಾರೆ. ಮಕ್ಕಳು ಈ ಅವಕಾಶವನ್ನು ಬಳಸಿಕೊಂಡು ತಮ್ಮ ತರಗತಿ ಗಣಿತ ಪಠ್ಯದಲ್ಲಿ ಯಾವ ಭಾಗ/ಸಮಸ್ಯೆಯ ಪರಿಹಾರ ಅರ್ಥವಾಗಲಿಲ್ಲವೋ ಅಥವಾ ಎಲ್ಲಿ ಸಂಶಯವಿದೆಯೋ ಅದನ್ನು ವೆಬ್‌ನಲ್ಲಿ ದಾಖಲಿಸಬಹುದು. ಜೊತೆಗೆ ಅವರಿಗೆ ಉತ್ತರ ಮೇಲ್ ಅಥವಾ ದೂರವಣಿಯಲ್ಲಿ ಬೇಕು ಎಂಬುದನ್ನು ತಿಳಿಸಬೇಕು. ದೂರವಾಣಿಯಲ್ಲಿ ಮಕ್ಕಳೇ ತಿಳಿಸಿದ ಅನುಕೂಲವಾದ ಸಮಯದಲ್ಲಿ ಸೋಮಯಾಜಿ ಅವರೇ ಕರೆಮಾಡಿ ಉಚಿತವಾಗಿ ಮಕ್ಕಳ ಸಂಶಯಗಳನ್ನು ಬಗೆಹರಿಸುತ್ತಾರೆ.

ವೆಬ್‌ನಲ್ಲಿ ಮೊದಲಿಗೆ ಸಮಸ್ಯೆಯನ್ನು ಮತ್ತು ಅದರ ಕುರಿತ ಸಂಪೂರ್ಣ ವಿವರವನ್ನು ದಾಖಲಿಸಬೇಕು. ಅದನ್ನು ಕನ್ನಡ ಮತ್ತು ಇಂಗ್ಲೀಷ್‌ನಲ್ಲೂ ಬರೆಯಬಹುದು. ಪ್ರತಿ ಪ್ರಶ್ನೆಗೂ ಒಂದು ಸಂಖ್ಯೆಯನ್ನು ನೀಡಲಾಗುತ್ತದೆ. ನಂತರ ಸಮಸ್ಯೆಗೆ ಪರಿಹಾರಗಳು





ಮೇಲ್ ಅಥವಾ ದೂರವಾಣಿಯಲ್ಲಿ ಬೇಕು ಎಂಬುದರ ವಿವರ ನಮೂದಿಸಬೇಕು. ದೂರವಾಣಿಯಾದರೆ ಮಕ್ಕಳಿಗೆ ಅನುಕೂಲವಾದ ಸಮಯವನ್ನು ತಿಳಿಸಬೇಕು. ಆಗ ಅವರೇ ನೇರವಾಗಿ ಕರೆ ಮಾಡಿ ಸಂದೇಹ ಪರಿಹರಿಸುತ್ತಾರೆ. ಪರಿಹಾರದ ಸಂಪೂರ್ಣ ಪಟ್ಟಿಯನ್ನು ಒದಗಿಸುತ್ತಾರೆ. ಒಂದು ರೀತಿಯಲ್ಲಿ ಇದು ಮಕ್ಕಳ ಮನೆ ಬಾಗಿಲಿಗೆ ಪರಿಹಾರವನ್ನು ಒದಗಿಸುತ್ತದೆ ಎನ್ನಬಹುದು. ವಿವರಗಳಿಗೆ www.eShale.org/ganita8910 ಸಂದರ್ಶಿಸಬಹುದು.

### ಗಣಿತ ಸೂತ್ರಗಳ ಕೈಪಿಡಿ:–

ಗಣಿತದ ಸೂತ್ರಗಳು ಮನನವಾದರೆ ಅದು ಇನ್ನಷ್ಟು ಹತ್ತಿರವಾಗುತ್ತದೆ ಎನ್ನುವ ಆಶಯ ಮತ್ತು 2006ರಿಂದ ಗಣಿತ ಕಲಿಕಾ ಪ್ರಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಅನುಭವದ ಆಧಾರದಲ್ಲಿ ಸೋಮಯಾಜಿಯವರು, 2023ರರಲ್ಲಿ "ಗಣಿತ ಸುತ್ರ"ಎನ್ನುವ ವರ್ಣಮಯ ಪುಸ್ತಕವನ್ನು ಪ್ರಕಟಿಸಿದ್ದಾರೆ. ಅದರಲ್ಲಿ 8, 9 ಮತ್ತು 10ನೇ ತರಗತಿಯ ಪಾಠಗಳಲ್ಲಿ ಬರುವ ಎಲ್ಲಾ ಸೂತ್ರಗಳು ಮತ್ತು ವ್ಯಾಖ್ಯಗಳನ್ನು ಸಂಗ್ರಹಿಸಿ ನೀಡಿದ್ದಾರೆ. ಇದು ಮಕ್ಕಳ ಕಲಿಕೆಯ ಜೊತೆಗೆ ಎನ್.ಟಿ.ಎಸ್.ಸಿ. ಮತ್ತು ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗೆ ಸಾಕಷ್ಟು ನೆರವನ್ನು ನೀಡುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಒಂದು ಅರ್ಥದಲ್ಲಿ ಗಣಿತದಲ್ಲಿ ಸೋಲುವವರಿಗೆ ಈ ಪುಸ್ತಕ ಗೆಲುವಿನ ಅಭಯವನ್ನು ನೀಡುತ್ತದೆ. ಈ ಪುಸ್ತಕದ ಬೆಲೆ 100ರೂ ಇದ್ದರೂ ಸರಕಾರಿ ಶಾಲಾ ಮಕ್ಕಳಿಗೆ ಉಚಿತವಾಗಿ ವಿತರಿಸಲು ದಾನಿಗಳು ಮುಂದೆ ಬಂದಲ್ಲಿ ಕೇವಲ 30ರೂಗೆ ನೀಡುವುದಾಗಿ ಅವರು ಹೇಳಿರುವುದು ಗಮನಿಸಿದಾಗ ರಾಜಶೇಖರ ಸೋಮಯಾಜಿ ಅವರು ಮಕ್ಕಳಿಗೆ ಗಣಿತ ಕಲಿಸಲು ಹೊಂದಿರುವ ಆಸಕ್ತಿ ಸ್ಪಷ್ಟವಾಗಿ ಮನವರಿಕೆಯಾಗುತ್ತದೆ.

ಸರಿ ಹಾಗಾದರೆ ಇನ್ನು ತಡವೇಕೆ. ನಮ್ಮ ಸಮಸ್ಯೆ ಬಗೆಹರಿಕೊಳ್ಳುತ್ತಾ, ಸೋಮಯಾಜಿ (9880831316)ಅವರ ಮಕ್ಕಳ ಪರ ಕಾಳಜಿಗೆ ನಮ್ಮದೊಂದು ಸಲಾಂ ಹೇಳೋಣ.

# ದಾನಕ್ಕೆ ದೇವರೇ ಶರಣಾಗುವ...

■ ದೀಪಶ್ರೀ ಎಸ್ ಕೂಡ್ಲಿಗಿ



ದೇವರಾಯ ಒಬ್ಬ ಧನಿಕ ದಾನಿಕ. ಆತ ಬಾಲ್ಯದಿಂದಲೂ ಬಡಬಗ್ಗರಿಗೆ, ನಿರ್ಗತಿಕರಿಗೆ ಸಹಾಯ ಮಾಡುತ್ತಿದ್ದನು. ಮದುವೆಯಾಗಿ,ಮಕ್ಕಳು ಜನಿಸಿದರೂ ಭವಿಷ್ಯತ್ತಿನ ಯೋಚನೆಗೈಯ್ಯುತ್ತಿರಲ್ಲ. ಅವನ ದಾನದ ಕಾರ್ಯಕ್ಕೆ ವಿರಾಮ ಬೀಳಲಿಲ್ಲ. ಅವನ ಹೆಂಡತಿ,ಮಕ್ಕಳು ಸಹ ಉದಾರತೆಯನ್ನು ಮುಂದುವರೆಸಿದರು. ಅವನ ಧ್ಯೇಯ ಒಂದೇ ಆಗಿತ್ತು, ಯಾರೊಬ್ಬರೂ ತನ್ನ ಮನೆಯಿಂದ ಬರಿಗೈಯಲ್ಲಿ ಹೋಗಬಾರದು ಎಂಬುದು. ಹೀಗೇ ದಾನ ಮಾಡುತ್ತಿದ್ದ, ದೇವರಾಯನಿಗೆ ಒಮ್ಮೆ ಹಣದ ಕೊರತೆಯಾಯಿತು. ಆತನ ಕುಟುಂಬ ತಿಂಗಳುಗಟ್ಟಲೆ ಊಟವಿಲ್ಲದೆ ಪರದಾಡಬೇಕಾದ ಸ್ಥಿತಿ ನಿರ್ಮಾಣವಾಯಿತು.

ಹೀಗಾದಾಗ, ದೇವರಾಯ ದುಡಿದು ಸ್ವಲ್ಪ ಅಕ್ಕಿ, ತುಪ್ಪ, ಗೋಧಿ ಹಾಗೂಸಕ್ಕರೆಯನ್ನುತಂದನು.ಪತ್ನಿಅಡುಗೆಸಿದ್ಧಪಡಿಸಲಾಗಿ,ದೇವರಿಗೆ ಧನ್ಯವಾದ ಅರ್ಪಿಸಿ, ಮನೆಯವರೆಲ್ಲರಿಗೂ ಊಟಕ್ಕಿಟ್ಟು ತಾನು ಊಟಕ್ಕೆ ಕುಳಿತನು.ಅಷ್ಟರಲ್ಲೊಬ್ಬ ಸಂತ ಬಾಗಿಲನ್ನು ಬಡಿದನು.

## ಬೆಳಕಿನ ಹಾದಿ

ದೇವರಾಯನು ಅತಿಥಿಗೆ ನಮಸ್ಕರಿಸಿ ಬರಮಾಡಿಕೊಂಡು ಊಟ ಬಡಿಸಿದನು. ಸಂತನು ತೃಪ್ತನಾಗಿ ಹೊರಟುಹೋದನು. ದೇವರಾಯ ಮತ್ತು ಅವನ ಕುಟುಂಬಕ್ಕೆ ಅರ್ಧದಷ್ಟು ಆಹಾರ ಉಳಿದಿತ್ತು.

ಪುನಃ ಊಟಕ್ಕೆ ಕುಳಿತಾಗ ಹಸಿದ ರೈತನೊಬ್ಬ ಆಹಾರ ಅರಸಿ ಬಂದನು. ದೇವರಾಯನು ಅವನನ್ನು ಆಸನದ ಮೇಲೆ ಕೂರಿಸಿ, ಊಟ ಬಡಿಸಿದನು. ರೈತನು ಊಟ ಸೇವಿಸಿ ಸಂತೃಪ್ತನಾದನು. ಕೊನೆಗೆ ಸ್ವಲ್ಪವೇ ಆಹಾರ ಉಳಿದಿತ್ತು. ದೇವರಾಯನ ಕುಟುಂಬವು ಉಳಿದಿದ್ದನ್ನು ಹಂಚಿಕೊಂಡು ತಿನ್ನಲು ಅಣಿಯಾದರು. ಅದೇ ವೇಳೆಗೆ, ಒಬ್ಬ ಪ್ರಯಾಣಿಕ ಬಾಗಿಲಲ್ಲಿ ಕಾಣಿಸಿಕೊಂಡನು. ಅವನೊಡನೆ ನಾಲ್ಕು ನಾಯಿಗಳು ಇದ್ದವು. ಪ್ರಯಾಣಿಕ ತನಗೆ, ತನ್ನ ನಾಯಿಗಳಿಗೆ ಆಹಾರ ನೀಡುವಂತೆ ಬೇಡಿಕೊಂಡನು. ದೇವರಾಯನು ಉಳಿದಿದ್ದನ್ನು ಅತಿಥಿಗೆ ಅರ್ಪಿಸಿದನು. ಹಸಿದ ನಾಯಿಗಳು ಪಾತ್ರೆಗೆ ಬಾಯಿ ಹಾಕಿ ತಿಂದವು. ಪಾತ್ರೆ ಖಾಲಿಯಾಯಿತು.

ದೇವರಾಯ ಮುಗುಳ್ನಕ್ಕು, "ದೇವರು ದಯೆ ತೋರಿದ್ದಾನೆ, ನಮಗೆ ಸ್ವಲ್ಪ ನೀರಾದರೂ ಉಳಿದಿದೆ." ಆಗ ಯಾರೋ ಅಳುವುದು ಅವನಿಗೆ ಕೇಳಿಸಿತು, "ಅಯ್ಯೋ ಸ್ವಾಮಿ, ನಾನು ಬಾಯಾರಿಕೆಯಿಂದ ಸಾಯುತ್ತಿದ್ದೇನೆ. ದಯೆಯಿಟ್ಟು ನನಗೆ ಸ್ವಲ್ಪ ನೀರು ಕೊಡುತ್ತೀರಾ? " ಎಂದನು.ದೇವರಾಯನು ನೀರು ಕೊಟ್ಟು ಬಡವನ ಬಾಯಾರಿಕೆ ನಿವಾರಿಸಿದನು. ದೇವರಾಯನು ನಮ್ರತೆಯಿಂದ ಅವನನ್ನು ನೋಡುತ್ತಿದ್ದಂತೆ, ಬಡವನು ಬದಲಾಗಿ ಸೃಷ್ಟಿಕರ್ತನಾದ ಬ್ರಹ್ಮ ಪ್ರತ್ಯಕ್ಷಗೊಂಡನು.

"ದೇವರಾಯ, ನಿನ್ನನ್ನು ಪರೀಕ್ಷಿಸಲು ದೇವತೆಗಳು ಭೂಮಿಗೆ ಬಂದರು. ನಿನ್ನ ದಾನದ ಮನೋಭಾವದಿಂದ ನಾವು ಸಂತುಷ್ಟರಾಗಿದ್ದೇವೆ. ನಿನಗೆ ಯಾವುದೇ ವರ ಕೊಡಲು ಸಿದ್ಧರಿದ್ದೇವೆ ಕೇಳು "ಎಂದನು. ದೇವರಾಯನು ಬ್ರಹ್ಮನಿಗೆ ನಮಸ್ಕರಿಸಿ ಹೇಳಿದನು:

ನಾನು ಯಾವಾಗಲೂ ನನ್ನಲ್ಲಿ ಇರುವುದನ್ನು ಹಂಚಿಕೊಳ್ಳುವಂತೆ ವರ ಕೊಡು ಎಂದು ಮೊರೆ ಇಟ್ಟನು. ಬ್ರಹ್ಮದೇವನು ದೇವರಾಯನನ್ನು ಆಶೀರ್ವದಿಸಿದನು ಮತ್ತು ಅವನ ಸರ್ವ ಸಂಪತ್ತನ್ನು ಪುನಃಸ್ಥಾಪಿಸಿದನು. ದೇವರಾಯ ಮತ್ತು ಅವನ ಕುಟುಂಬದವರು ಮತ್ತೆ ಹಸಿವಿನಿಂದ ಬಳಲದೆ ಅಗತ್ಯವಿರುವವರಿಗೆ ಸಹಾಯ ಮಾಡುವುದನ್ನು ಮುಂದುವರೆಸಿದರು.

ನಮ್ಮಲ್ಲಿರುವುದನ್ನು ಹಂಚಿ ತಿಂದರೆ ಅದರಲ್ಲಿ ಸಿಗುವ ಸುಖವೇ ಬೇರೆ. ದಾನ, ಧರ್ಮದ ಮಾರ್ಗಕ್ಕೆ ದೇವರೇ ಮನಸೋಲುತ್ತಾನೆ. ಮುಷ್ಠಿಯಷ್ಟು ಸತ್ಕಾರ್ಯಕ್ಕೆ ಬೊಗಸೆಯಷ್ಟು ಆಶೀರ್ವಾದ ಮಾಡುತ್ತಾನೆ.